# ಮೆದುಳು ಗೆಡ್ಡೆಗೆ ಶಸ್ತ್ರ ಚಿಕಿತ್ಸೆ: ಹೊಸ ವಿಧಾನ

ಮೆದುಳು ಶಸ್ತ್ರಚಿಕಿತ್ಸೆಗೆ ನೂರು ವರ್ಷಗಳ ಇತಿಹಾಸವಿದೆ. ಮೂಗಿನ ಮೂಲಕವೇ ಮೆದುಳು ಶಸ್ತ್ರಚಿಕಿತ್ಸೆ ನಡೆಯುತ್ತದೆ. ಆದರೆ ಇತ್ತೀಚೆಗೆ ಪಿಟ್ಸ್‌ಬರ್ಗ್‌ನಲ್ಲಿ ವೈದ್ಯರ ತಂಡವೊಂದು ಮೆದುಳು ಕ್ಯಾನ್ಸರ್ ಗೆಡ್ಡೆಯ ಶಸ್ತ್ರಚಿಕಿತ್ಸೆಗೆ ಹೊಸ ರೀತಿಯ ಉಪಕರಣ ಬಳಸಿದ್ದು, ಚಿಕಿತ್ಸೆ ಯಶಸ್ವಿಯೂ ಆಗಿದೆ.

ಲೊರಿ ಸಿಮಿನೊ ಎಂಬ ಮಹಿಳೆಯ ಮೆದುಳಿನಲ್ಲಿ ಗೆಡ್ಡೆಯೊಂದು ಬೆಳೆದಿತ್ತು. ಅದು ದೃಷ್ಟಿ ನರದ ಮೇಲೆ ಒತ್ತಡ ಹೇರುತ್ತಿತ್ತು. ಇದನ್ನು ಗಮನಿಸಿದ ವೈದ್ಯರು ಮೂಗಿನ ಮೂಲಕವೇ ಎಂಡೋಸ್ಕೋಪ್ ಸಾಧನಕ್ಕೆ ಸೂಕ್ಷ್ಮವಾದ ಶಸ್ತ್ರಚಿಕಿತ್ಸಕ ಸಾಧನ ಹಾಗೂ ಕ್ಯಾಮೆರಾವನ್ನು ಅಳವಡಿಸಿ ಮೆದುಳಿನಲ್ಲಿದ್ದ ಗೆಡ್ಡೆಯ ಬಳಿಗೆ ಕಳುಹಿಸಿದರು. ನಂತರ ಗೆಡ್ಡೆಯ ಸ್ವಲ್ಪ ಸ್ವಲ್ಪ ಭಾಗವನ್ನೇ ಕತ್ತರಿಸಿ ತೆಗೆಯಲಾಯಿತು' ಎಂದು ವೈದ್ಯರ ತಂಡದ ಮುಖ್ಯಸ್ಥ ಕಾರ್ಲ್ ಸಿಂಡರ್‌ಮನ್ ಹೇಳಿದ್ದಾರೆ.

ಈ ಶಸ್ತ್ರಚಿಕಿತ್ಸೆಯಿಂದಾಗಿ, ಇನ್ನು ಮುಂದೆ ಮೂಗಿನ ಮೂಳೆಯನ್ನು ಕತ್ತರಿಸಿ ಮುಖ ವಿಕಾರವಾಗುವ ಯಾವುದೇ ಭಯವಿಲ್ಲ. ಜತೆಗೆ ಬೇಗ ಗುಣಮುಖರಾಗುವ ಅನುಕೂಲವೂ ಇದೆ. 'ಆದರೆ ಈ ರೀತಿಯ ಶಸ್ತ್ರಚಿಕಿತ್ಸೆಯಿಂದ ಎಲ್ಲಾ ಬಗೆಯ ಗೆಡ್ಡೆಗಳನ್ನು ತೆಗೆಯಲು ಸಾಧ್ಯವಿಲ್ಲ. ಕೆಲವೊಂದು ಗೆಡ್ಡೆಗಳು ಗಟ್ಟಿಯಾಗಿದ್ದು ಅವುಗಳಿಗೆ ಎಂಡೋಸ್ಕೋಪ್ ಸಾಧನ ಬಳಸಲು ಆಗದು' ಎಂದು ವೈದ್ಯರು ಹೇಳಿದ್ದಾರೆ.

## ಸ್ಥೂಲಕಾಯಕ್ಕೆ ವೈರಸ್ ಸೋಂಕು ಕಾರಣ!

ಬಾಲ್ಯದಲ್ಲಿ ಕಾಡುವ ವೈರಸ್‌ನ ಸೋಂಕು ನಂತರ ಸ್ಥೂಲಕಾಯಕ್ಕೆ ಕಾರಣವಾಗಬಹುದು ಎಂದು ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಡಿಯಾಗೊ ಸ್ಕೂಲ್ ಆಫ್ ಮೆಡಿಸಿನ್‌ನ ಅಧ್ಯಯನವೊಂದು ತಿಳಿಸಿದೆ. ಅಡಿನೋ ವೈರಸ್‌ನ ಸೋಂಕು ತಗುಲಿದ ಮಕ್ಕಳಿಗೆ ಭವಿಷ್ಯದಲ್ಲಿ ಸ್ಥೂಲಕಾಯ ಸಮಸ್ಯೆ ಕಾಡಲಿದೆ ಎಂಬ ಆಘಾತಕಾರಿ ವಿಷಯವನ್ನು ವಿವಿಯ ಸಂಶೋಧಕರು ಬಹಿರಂಗ ಪಡಿಸಿದ್ದಾರೆ.

8ರಿಂದ 18ರ ವಯೋಮಾನದ 124 ಮಕ್ಕಳನ್ನು ತಪಾಸಣೆಗೆ ಒಳಪಡಿಸಲಾಗಿತ್ತು. ಅಡಿನೋವೈರಸ್ 36 (ಎಡಿ36) ವಿರುದ್ಧ ಹೋರಾಡುವ ರೋಗ ನಿರೋಧಕಗಳನ್ನೂ ಬಳಿಯಲ್ಲಿಟ್ಟುಕೊಂಡು ಪರೀಕ್ಷೆ ಆರಂಭಿಸಲಾಯಿತು. ಉಸಿರಾಟ, ಜೀರ್ಣ ಹಾಗೂ ಇನ್ನಿತರ ಕ್ರಿಯೆಗಳಿಗೆ ಸಂಬಂಧಿಸಿದ ಸೋಂಕಿಗೆ ಕಾರಣವಾಗಿರುವ 'ಎಡಿ 36' ಬಳಸಿಕೊಂಡು ಪ್ರಯೋಗ ಆರಂಭಿಸಲಾಯಿತು.

ದೇಹ ತೂಕ ಸೂಚ್ಯಂಕ (ಬಿಎಂಐ)ದ ಆಧಾರವನ್ನು ಗಮನಿಸಿದಾಗ ಅರ್ಧದಷ್ಟು ಮಕ್ಕಳ ಸ್ಥೂಲಕಾಯ ಹೆಚ್ಚಾಗಿತ್ತು. ಇನ್ನು 19 ಮಕ್ಕಳಲ್ಲಿ ಇದು ಯಾವುದೇ ಪರಿಣಾಮವನ್ನು ಬೀರಿಲ್ಲದಿರುವುದು ಗಮನಕ್ಕೆ ಬಂತು. ಹೀಗಾಗಿ 'ಎಡಿ36' ಎಂಬ ಅಡಿನೋವೈರಸ್ ಸ್ಥೂಲಕಾಯಕ್ಕೂ ಕಾರಣವಾಗುತ್ತದೆ ಎನ್ನುವ ನಿರ್ಧಾರಕ್ಕೆ ಸಂಶೋಧಕರು ಬಂದಿದ್ದಾರೆ.

## ಸೋಂಕಿಗೆ ಬ್ರೇಕ್

ಕೆಮ್ಮುವ ವ್ಯಕ್ತಿಯ ಬಾಯಿಯಿಂದ ಹೊರಚಿಮ್ಮುವ ಕೆಮ್ಮುಕಾರಕ ಸೋಂಕುಗಳು ಅಕ್ಕಪಕ್ಕ ಇರುವ ಇತರರಿಗೂ ಹರಡುತ್ತದೆ. ಏಕೆಂದರೆ ದೇಹದೊಳಗಿಂದ ಬಾಯಿಯ ಮೂಲಕ ವಾತಾವರಣ ಪ್ರವೇಶಿಸುವ ಈ ರೋಗಾಣುಗಳು ಕೆಲ ಕಾಲ ಗಾಳಿಯಲ್ಲಿ ಹಾರಾಡುತ್ತಿರುತ್ತವೆ. ಹೀಗಾಗಿ ಇದನ್ನು ಸೇವಿಸಿದ ಯಾರಿಗೇ ಆದರೂ ಶೀಘ್ರವಾಗಿ ಕೆಮ್ಮು ಆವರಿಸುತ್ತದೆ. ಈ ಹರಡುವಿಕೆಯನ್ನೇ ತಡೆಗಟ್ಟಿದರೆ ಸೋಂಕಿಗೆ ಕಾರಣವಾಗುವ ರೋಗಾಣುಗಳು ದ್ವಿಗುಣಗೊಳ್ಳುವುದಕ್ಕೆ ಕಡಿವಾಣ ಹಾಕಿದಂತಾಗುತ್ತದೆ.

ಅಲ್ಬರ್ಟಾ ವಿಶ್ವವಿದ್ಯಾಲಯದ ಔಷಧ ವಿಭಾಗದ ವಿಜ್ಞಾನಿಗಳು ಸಂಶೋಧನೆ ನಡೆಸಿ ಈ ಸಮಸ್ಯೆಗೆ ಔಷಧವನ್ನು ಕಂಡು ಹಿಡಿದಿದ್ದಾರೆ. ಈ ಔಷಧವನ್ನು ಉಸಿರಿನ ಮೂಲಕ ಎಳೆದುಕೊಳ್ಳುವುದರಿಂದ ರೋಗಾಣುಗಳು ಹೊರ ಚಿಮ್ಮುವುದನ್ನು ತಡೆಗಟ್ಟಬಹುದು. ಐದು ವರ್ಷಗಳ ಕಾಲ ನಡೆದ ಈ ಸಂಶೋಧನೆಯಲ್ಲಿ ಔಷಧ ಕಂಡು ಹಿಡಿಯಲು ಔಷಧ ವಿಭಾಗದವರೊಂದಿಗೆ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗವೂ ಕೈ ಜೋಡಿಸಿತ್ತು! ಕೆಮ್ಮಿದಾಗ ಹೊರಚಿಮ್ಮುವ ರೋಗಾಣುಗಳ ಗಾತ್ರವನ್ನು ಪತ್ತೆ ಮಾಡಿ ಅವುಗಳನ್ನು ಶ್ವಾಸಕೋಶದಲ್ಲೇ ದಮನ ಮಾಡುವ ಔಷಧವನ್ನು ಕಂಡು ಹಿಡಿಯಲಾಗಿದೆ. ಆದರೆ ಈ ಔಷಧ ಇನ್ನೂ ಕ್ಲಿನಿಕಲ್ ರಿಸರ್ಚ್ ಹಂತದಲ್ಲಿದೆ.

■ ಇಎಸ್‌ಎಸ್

